**ಸಿ.ಸಿ. ನಂ. 268/2023** **ಚಾಸಾ–1 ಫ್ರಾಸಾ–1**

ಸಾಕ್ಷಿಗೆ ದಿನಾಂಕಃ 08.08.2024 ರಂದು ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್.ಎಂ. ವಕೀಲರಿಂದಃ

ನಾನು ದ್ವಿತೀಯ ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆ 3 ಜನ ಮಕ್ಕಳು. ನಾನು ಹಿರಿಯ ಮಗಳು. ನನ್ನ ತಂಗಿ ಬೆಂಗಳೂರಿನಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದಾಳೆ. ನನ್ನ ತಮ್ಮ ಕಾಲೇಜಿನಲ್ಲಿ PT teacher ಆಗಿ ಕೆಲಸ ಮಾಡುತ್ತಿದ್ದಾನೆ. ನಮ್ಮ ಗ್ರಾಮದಿಂದ ಗುಂಡ್ಲುಪೇಟೆಗೆ 25 ಕಿ.ಮೀ ದೂರ ಇರುತ್ತದೆ. ನಮ್ಮ ಗ್ರಾಮದಿಂದ 1ನೇ ಆರೋಪಿಯ ಗ್ರಾಮಕ್ಕೆ 65 ಕಿ.ಮೀ ದೂರ ಇರುತ್ತದೆ. 1ನೇ ಆರೋಪಿಯ ತಂದೆಗೆ 4 ಜನ ಮಕ್ಕಳು. ಅವರು ಜಯಲಕ್ಷ್ಮಿ, ರೇಖಾ, 1ನೇ ಆರೋಪಿ ಮತ್ತು ರಮೇಶ್. ಜಯಲಕ್ಷ್ಮಿರವರು ಸಿಂಧುವಳ್ಳಿಗೆ ಮದುವೆಯಾಗಿ ಅಲ್ಲೇ ವಾಸವಾಗಿರುತ್ತಾರೆ ಎಂದರೆ ಸರಿ. ರೇಖಾರವರು ಹೊಸಕೋಟೆಗೆ ಮದುವೆಯಾಗಿ ಅಲ್ಲೇ ವಾಸವಾಗಿರುತ್ತಾರೆ ಎಂದರೆ ಸರಿ. ರಮೇಶ್ ರವರು 2020 ರಲ್ಲಿ ಮದುವೆಯಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮದುವೆಯ ಪೂರ್ವದಲ್ಲಿ 1ನೇ ಆರೋಪಿ ಕಡಕೋಳದ ಟಿ.ವಿ.ಎಸ್. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಮದುವೆಯಾದ 3 ತಿಂಗಳವರೆಗೆ ಅದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಕೋವಿಡ್–19 ಲಾಕ್ ಡೌನ್ ನಲ್ಲಿ 1ನೇ ಆರೋಪಿ ಕೆಲಸ ಬಿಟ್ಟಿರುತ್ತಾರೆ ಎಂದರೆ ಸರಿ. ನಮ್ಮ ಮದುವೆಯಾದ 15 ದಿನಗಳ ನಂತರ ಲಾಕ್ ಡೌನ್ ಆಗಿರುತ್ತದೆ ಎಂದರೆ ಸರಿ. ಮದುವೆಯಾದ 3– 4 ತಿಂಗಳವರೆಗೆ 1ನೇ ಆರೋಪಿ ನಮ್ಮ ಮನೆಯಲ್ಲೇ ವಾಸವಾಗಿದ್ದರು. ಮದುವೆಯಾದ 6 ತಿಂಗಳ ನಂತರ ಲಾಕ್ ಡೌನ್ ಮುಗಿದಿದ್ದು 1ನೇ ಆರೋಪಿ ನಮ್ಮ ಮನೆಯಿಂದ ಕೆಲಸಕ್ಕೆ ಹೋಗುತ್ತಿದ್ದ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು 6 ತಿಂಗಳ ಗರ್ಭಿಣಿಯಾಗಿದ್ದೆ ಎಂದರೆ ಸರಿಯಲ್ಲ.

ದಿನಾಂಕಃ 18.02.2021 ರಂದು ನನಗೆ ಮಗು ಜನಿಸಿರುತ್ತದೆ. ನಾನು 1ನೇ ಆರೋಪಿಯ ಮನೆಗೆ ಹೋದ 2 ತಿಂಗಳ ನಂತರ ಸೀಮಂತ ಕಾರ್ಯ ಮಾಡಿರುತ್ತಾರೆ. ನನ್ನನ್ನು ಚಾಮರಾಜನಗ ಜಿಲ್ಲಾಸ್ಪತ್ರೆಗೆ ಹೆರಿಗೆಗಾಗಿ ಸೇರಿಸಿರುತ್ತಾರೆ ಎಂದರೆ ಸರಿ. ಆಗ 1ನೇ ಆರೋಪಿ ನನ್ನ ಜೊತೆ ಇದ್ದರು ಎಂದರೆ ಸರಿ. ಆಸ್ಪತ್ರೆಯಿಂದ ನಾನು ನನ್ನ ತಾಯಿಯ ಮನೆಗೆ ಹೋಗಿರುತ್ತೇನೆ ಎಂದರೆ ಸರಿ. ಬಾಣಂತನಕ್ಕಾಗಿ 1 ವರ್ಷಗಳವರೆಗೆ ನನ್ನ ತಾಯಿಯ ಮನೆಯಲ್ಲಿ ಇದ್ದೆ ಎಂದರೆ ಸರಿ. 1 ವರ್ಷದ ನಂತರ ನಾಮಕರಣ ಮಾಡಿ 1ನೇ ಆರೋಪಿಯ ಮನೆಗೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿ. ಆಗ ನನ್ನ ಅಜ್ಜಿ ನನ್ನ ಜೊತೆ ಆರೋಪಿತರ ಮನೆಗೆ ಬಂದಿದ್ದರು ಎಂದರೆ ಸರಿ. 7 ದಿನಗಳ ನಂತರ ಮತ್ತೇ ನಾನು ತಾಯಿ ಮನೆಗೆ ಹೋಗಿರುತ್ತೇನೆ.

ನನ್ನ ತಂದೆ ಕೂಲಿ ಕೆಲಸ ಮಾಡುತ್ತಾರೆ. ನನ್ನ ತವರು ಮನೆಯಲ್ಲಿ ದನ ಕರು ಇರುತ್ತವೆ. 2ನೇ ಆರೋಪಿಯ ಹೆಂಡತಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಆರೋಪಿತರ ಮನೆಯಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರು ಮಹಿಳೆಯರು ಇರಲಿಲ್ಲ ಎಂದರೆ ಸರಿ. ಆರೋಪಿತರ ಮನೆಯಲ್ಲಿ ಮನೆಯ ಕೆಲಸದ ಎಲ್ಲಾ ಜವಾಬ್ದಾರಿಗಳು ನನ್ನ ಮೇಲಿತ್ತು ಎಂದರೆ ಸರಿ. 1ನೇ ಆರೋಪಿ 4ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ಈಗ ನಾನು ನನ್ನ ತವರು ಮನೆಯ ಎಲ್ಲಾ ಜವಾಬ್ದಾರಿಗಳನ್ನು ನೋಡಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯ ಮುಂಚೆ ನಾನು ಹಿರಿಯ ಮಗಳಾದ್ದರಿಂದ ಎಲ್ಲಾ ಜವಾಬ್ದಾರಿಗಳನ್ನು ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಗುಂಡ್ಲುಪೇಟೆ ನ್ಯಾಯಾಲಯದಲ್ಲಿ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ನ್ಯಾಯಾಲಯದಲ್ಲಿ 1ನೇ ಆರೋಪಿ ಜೀವನಾಂಶದ ಹಣ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ನ್ಯಾಯಾಲಯದಲ್ಲಿ 1ನೇ ಆರೋಪಿ ಹೆಂಡತಿ ಮಕ್ಕಳು ಬೇಕು ಎಂದು ಹೇಳುತ್ತಿದ್ದಾರೆ ಎಂದರೆ ಸರಿ.

1ನೇ ಆರೋಪಿ ನನಗೆ ಯಾರ ಜೊತೆ ಅಕ್ರಮ ಸಂಬಂಧ ಇದೆ ಎಂದು ಹೇಳಿ ಜಗಳ ಮಾಡಿಲ್ಲ ಎಂದರೆ ಸರಿ. ದಿನಾಂಕಃ 02.05.2022 ರಂದು 1ನೇ ಆರೋಪಿ ನನಗೆ ಹಲ್ಲೆ ಮಾಡಿರುತ್ತಾರೆ. ಸದರಿ ವಿಚಾರವನ್ನು ನಾನು ಪೊಲೀಸರ ಮುಂದೆ ತಿಳಿಸಿಲ್ಲ ಎಂದರೆ ಸರಿ. ದಿನಾಂಕಃ 12.02.2022 ರಂದು 1ನೇ ಆರೋಪಿ ತವರು ಮನೆಯಿಂದ ವರದಕ್ಷಿಣೆ ಹಣ ತರುವಂತೆ ಒತ್ತಾಯ ಮಾಡುತ್ತಿದ್ದರು. ಈ ವಿಚಾರವನ್ನು ನಾನು ಪೊಲೀಸರ ಮುಂದೆ ತಿಳಿಸಿಲ್ಲ ಎಂದರೆ ಸರಿ. 1ನೇ ಆರೋಪಿ ತವರು ಮನೆಯಿಂದ 2 ಲಕ್ಷ ವರದಕ್ಷಿಣೆ ತರುವಂತೆ ಕೇಳುತ್ತಿದ್ದ. ಈ ವಿಚಾರವನ್ನು ನಾನು ಪೊಲೀಸರ ಮುಂದೆ ತಿಳಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರಿನಲ್ಲಿರುವ ಜಮೀನನ್ನು ನನ್ನ ಹೆಸರಿಗೆ ಮಾಡಿಕೋ ಅದರಲ್ಲಿ ಸಾಲ ತೆಗೆದುಕೊಳ್ಳುತ್ತೇನೆ ಎಂದು 1ನೇ ಆರೋಪಿ ಹೇಳುತ್ತಿದ್ದ ಎಂಬ ವಿಚಾರವನ್ನು ನಾನು ಪೊಲೀಸರ ಮುಂದೆ ತಿಳಿಸಿರುತ್ತೇನೆ. ಸದರಿ ವಿಚಾರಗಳನ್ನು ನಾನು ಪೊಲೀಸರ ಮುಂದೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು 2ನೇ ಆರೋಪಿ ಮತ್ತು ಜಯಲಕ್ಷ್ಮಿ ರವರಿಗೆ ತಿಳಿಸಿದ ದಿನಾಂಕ ನನಗೆ ನೆನಪಿಲ್ಲ. ನಮ್ಮ ಮನೆಯಲ್ಲಿ 2 ಬಾರಿ ಮತ್ತು 1ನೇ ಆರೋಪಿ ಮನೆಯಲ್ಲಿ 1 ಬಾರಿ ನ್ಯಾಯಪಂಚಾಯಿತಿ ಮಾಡಿರುತ್ತೇವೆ. ಸದರಿ ವಿಚಾರವನ್ನು ನಾನು ಪೊಲೀಸರ ಮುಂದೆ ತಿಳಿಸಿಲ್ಲ ಎಂದರೆ ಸರಿಯಲ್ಲ.

ದಿನಾಂಕಃ 05.03.2022 ರಂದು ಆರೋಪಿತರು ನನ್ನ ಮನೆಯಿಂದ ಬೆಳಿಗ್ಗೆ 08.00 ಗಂಟೆಗೆ ಹೊರಗೆ ಹಾಕಿರುತ್ತಾರೆ. ಈ ವಿಚಾರವನ್ನು ನಾನು ಪೊಲೀಸರ ಮುಂದೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನಗೆ ವರದಕ್ಷಿಣೆ ತರುವಂತೆ ಹಿಂಸೆ ನೀಡಿಲ್ಲ ಮತ್ತು ಮನೆಯಿಂದ ಹೊರಗೆ ಹಾಕಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಚಾಸಾ–2 ರವರ ಕತ್ತಿನಲ್ಲಿದ್ದ ಕಿತ್ತು ಹಾಕಿದ ದಾರ ಬಿಳಿ ಬಣ್ಣದ್ದಾಗಿರುತ್ತದೆ. ಸದರಿ ದಾರವನ್ನು ಪೊಲೀಸರಿಗೆ ನೀಡಿಲ್ಲ. ಚಾಸಾ–2 ರವರಿಗೆ ಯಾವುದೇ ಗಾಯಗಳು ಆಗಿರಲಿಲ್ಲ. ದಿನಾಂಕಃ 24.08.2022 ರಂದು ಸಂಜೆ 05.45 ಗಂಟೆ

ಸಮಯದಲ್ಲಿ 1ನೇ ಆರೋಪಿ ನಮ್ಮ ಮನೆಗೆ ಬಂದಿಲ್ಲ, ಚಾಸಾ–2 ರವರ ಜೊತೆ ಜಗಳ ಮಾಡಿಲ್ಲ, ಹಲ್ಲೆ ಮಾಡಿಲ್ಲ ಮತ್ತು ನೋವುಂಟು ಮಾಡಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ನನ್ನ ಎಡಗಡೆ ಕಪಾಳಕ್ಕೆ ಹೊಡೆದಿರುತ್ತಾರೆ. ಈ ಬಗ್ಗೆ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಸದರಿ ವಿಚಾರವನ್ನು ಪೊಲೀಸರಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ.

ದೂರನ್ನು ನಾನೇ ಬರೆದಿರುತ್ತೇನೆ. ದೂರು ನೀಡಿದ ನಂತರ ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ. ದೂರು ನೀಡಿದ ಮರುದಿನ ಪೊಲೀಸರು ನಮ್ಮ ಗ್ರಾಮಕ್ಕೆ ಬಂದಿರುತ್ತಾರೆ. ಚಾಸಾ–12 ಮತ್ತು 13 ರವರು ನಮ್ಮ ಗ್ರಾಮದವರು ಎಂದರೆ ಸರಿ. ನಿಪಿ–2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಯಲ್ಲಿ 5–6 ಸಹಿ ಮಾಡಿರುತ್ತೇನೆ. ದೂರು ನೀಡಿದ ಮರುದಿನ ಪೊಲೀಸರು ನಮ್ಮ ಗ್ರಾಮಕ್ಕೆ ಬಂದಿಲ್ಲ, ಮಹಜರ್ ಜರುಗಿಸಿಲ್ಲ, ಫೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಮೊಬೈಲ್ ನಲ್ಲಿ 3–4 ಫೋಟೋಗಳನ್ನು ತೆಗೆದಿರುತ್ತಾರೆ. ದಿನಾಂಕಃ 16.09.2022 ರಂದು ನಾನು 1ನೇ ಆರೋಪಿ ಮನೆಗೆ ಹೋಗಿರುತ್ತೇನೆ. ಆ ದಿನ ಪೊಲೀಸರು ನನ್ನನ್ನು 1ನೇ ಆರೋಪಿ ಮನೆಯ ಬಳಿ ಕರೆದುಕೊಂಡು ಹೋಗಿದ್ದರು. ನಿಪಿ–4 ರಲ್ಲಿ ಸದರಿ ವಿಚಾರವನ್ನು ಬರೆದಿರುತ್ತಾರೆ. ಪೊಲೀಸರು ದಿನಾಂಕಃ16.09.2022 ರಂದು 1ನೇ ಆರೋಪಿಯ ಮನೆಯ ಬಳಿ ಬಂದಿಲ್ಲ, ಮಹಜರ್ ಜರುಗಿಸಿಲ್ಲ ಎಂದರೆ ಸರಿಯಲ್ಲ. ದೂರನ್ನು ಹೊರತುಪಡಿಸಿ ಪೊಲೀಸರ ಮುಂದೆ ಮರುಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಂದೆಯ ಮಾತು ಕೇಳಿ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ಮನೆಯಲ್ಲಿ ಮನೆಯ ಎಲ್ಲಾ ಕೆಲಸಗಳನ್ನು ನಾನೇ ಮಾಡಬೇಕಾಗುತ್ತದೆ ಎಂದು ನಾನು ತವರು ಮನೆಯಲ್ಲಿ ಉಳಿದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1ನೇ ಆರೋಪಿಯನ್ನು ಮನೆ ಅಳಿಯ ಮಾಡಿಕೊಳ್ಳುವ ಸಲುವಾಗಿ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿ ಈಗಲೂ ನನ್ನನ್ನು

ಪ್ರತ್ಯೇಕ ಮನೆ ಮಾಡಿ ಬಾಳ್ವೆ ಮಾಡಲು ಸಿದ್ದನಿದ್ದರೂ ಸಹ ನಾನು ನನ್ನ ತಂದೆ ಮಾತು ಕೇಳಿ 1ನೇ ಆರೋಪಿ ಮನೆಗೆ ಹೋಗುತ್ತಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ಮನೆಯಲ್ಲಿ ಕೇವಲ 2 ತಿಂಗಳು ಮಾತ್ರ ವಾಸವಾಗಿದ್ದೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ವರದಕ್ಷಿಣೆ ತರದಿದ್ದರೆ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಚಾಮರಾಜನಗರ.